ಇ) ಹಾಗಿದ್ದಲ್ಲಿ ಹೊಸ ಶೆಡ್ಯೂಲ್ (ಸಿಬ್ಬಂದಿಯೊಂದಿಗೆ) ಬಸ್ಸುಗಳನ್ನು ಯಾವಾಗ ನಿರ್ದಿಷ್ಟವಾಗಿ ಬಿಡುಗಡೆ ಮಾಡಲಾಗುವುದು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಾದಾಮಿ ಘಟಕವು ಬಾಗಲಕೋಟೆ ವಿಭಾಗಕ್ಕೆ ಸೇರಿದ್ದು 74 ಅನುಸೂಚಿಗಳಿಗೆ 80 ವಾಹನ ಬಲ ಹೊಂದಿ ಕಾರ್ಯಾಚರಣೆ ಮಾಡುತ್ತಿದೆ. 1995-96 ನೇ ಸಾಲಿನಲ್ಲಿ ಹೊಸ ವಾಹನಗಳ ಸೇರ್ಪಡೆ ಹಾಗೂ ಹಳೆ ವಾಹನಗಳ ರದ್ದತಿ ಈ ಕೆಳಕಂಡಂತಿದೆ :

ಮಾಸ	ಹೊಸ ವಾಹನಗಳ ಸೇರ್ಪಡೆ	ಒಟ್ಟಾರೆ ವಾಹನಗಳ ರದ್ದತಿ
ಏಪ್ರಿಲ್ 95	2	1
ಮೇ	2	-
ಜೂನ್	-	2
ಜುಲೈ 2	-	
ಆಗಸ್ಟ್	1	-
ಸೆಪ್ಟೆಂಬರ್	-	1
ಒಟ್ಟು	7	4

7 ಹೊಸ ವಾಹನಗಳಲ್ಲದೆ, ಒಂದು ಮರುಒಪ್ಪಗೊಳಿಸಿದ ವಾಹನ ಮತ್ತು ಒಂದು ಅಪಘಾತ ದುರಸ್ತಿಯಾದ ವಾಹನಗಳನ್ನು ಈ ಘಟಕಕ್ಕೆ ಕೊಡಲಾಗಿದೆ.

ಆ) ಕಳೆದ ಐದು ವರ್ಷಗಳಲ್ಲಿ ಬಾದಾಮಿ ಘಟಕಕ್ಕೆ 55 ಹೊಸ ಬಸ್ಸುಗಳನ್ನು ನೀಡಲಾಗಿರುತ್ತದೆ. ಅವುಗಳಲ್ಲಿ 34 ಬಸ್ಸುಗಳು ಹಳೆಯ ವಾಹನಗಳ ಬದಲಾವಣೆಗಾಗಿ ಮತ್ತು 21 ಬಸ್ಸುಗಳು ಹೊಸ ಅನುಸೂಚಿಗಳಿಗಾಗಿ ನಿಯೋಜಿಸಲಾಗಿದೆ.

ಪ್ರಸ್ತುತ ಬಾದಾಮಿ ಘಟಕದಿಂದ 74 ಅನುಸೂಚಿಗಳಲ್ಲಿ 339 ಸುತ್ತುವಳಿಗಳನ್ನು 150 ಮಾರ್ಗಗಳಲ್ಲಿ ಓಡಿಸುತ್ತಿದ್ದು, ಪ್ರತಿದಿನ 29,282 ಕಿ. ಮೀ. ಗಳನ್ನು ಬಾದಾಮಿ ತಾಲ್ಲೂಕಿನಲ್ಲಿ ಕಾರ್ಯಾಚರಣೆಗೊಳಿಸುತ್ತಿದೆ. ಪ್ರಸುತ್ತ ಬಾದಾಮಿ ಘಟಕದಿಂದ ಓಡಿಸುತ್ತಿರುವ ಸಾರಿಗೆಗಳು ಪ್ರಯಾಣಿಕರ ಹಾಗೂ ಪ್ರವಾಸಿಗರ ಬೇಡಿಕೆಗೆ ಅನುಗುಣವಾಗಿರುತ್ತದೆ.

ಇ) ಬೇಡಿಕೆಗೆ ಅನುಗುಣವಾಗಿ ಹೆಚ್ಚುವರಿ ಬಸ್ಸುಗಳನ್ನು ಓಡಿಸಲಾಗುವುದು.

ವಿಷಯ :- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ವ್ಯವಸಾಯ ಪರಿಕರಗಳನ್ನು ಕೊಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2286 (2968)

ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) :- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ರೈತರಿಗೆ ಅದರಲ್ಲೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ವ್ಯವಸಾಯ ಪರಿಕರಗಳನ್ನು 1995-96 ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಸರ್ಕಾರದವರು ಉದ್ದೇಶಿಸಿರುವುದೆ?

ಶ್ರೀ. ಸಿ. ಬೈರೇಗೌಡ (ಕೃಷಿ ಸಚಿವರು) :-

ಅ) ಉದ್ದೇಶಿಸಿದೆ. ಹಾಗೂ ವಿಶೇಷವಾಗಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಪರಿಕರಗಳಾದ ಬೀಜ, ರಸಗೊಬ್ಬರ, ಸಸ್ಯಸಂರಕ್ಷಣಾ ಔಷಧಿ, ಕೃಷಿ ಉಪಕರಣ ಇವು ಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ 1995-96ನೇ ಸಾಲಿನಲ್ಲಿ ರಾಜ್ಯ ವಲಯದ ಯೋಜನೆ, ಜಿಲ್ಲಾವಲಯದ ಪಂಚಾಯಿತಿ ಯೋಜನೆಯಡಿ ಈ ಕೆಳ ಕಂಡಂತೆ ಅನುದಾನವನ್ನು ಮೀಸಲಿಡಲಾಗಿದೆ.

ಮೊತ್ತ ಲಕ್ಷ ರೂ ಗಳಲ್ಲಿ

	ವಿಶೇಷ ಘಟಕಯೋಜನೆ	ಗಿರಿಜನ ಉಪ ಯೋಜನೆ	ಗುರಿಹಾಕಿಕೊಳ್ಳಲಾಗಿರುವ ಫಲಾನುಭವಿಗಳ ಸಂಖ್ಯೆ ವಿ.ಘ್.ಯೊ.	ಗಿ.ಉ.ಯೋ
1. ರಾಜ್ಯ ವಲಯ.	33.00	14.25	1650	1787
2. ಜಿಲ್ಲಾ ವಲಯ.	44.04	7.96	2111	995
3. ವಿಶೇಷ ಕೇಂದ್ರ ಸಹಾಯಧನ	-	16.58	-	2073
ಒಟ್ಟು	77.04	30.79	3761	4855

ಇದಲ್ಲದೆ ಕೇಂದ್ರ ಪುರಸ್ಕೃತ ವಿಕದಳ ಧಾನ್ಯ ಯೋಜನೆ ಎಣ್ಣೆಕಾಳು ಹಾಗೂ ಬೇಳೆ ಕಾಳು ಉತ್ಪಾದನಾ ಯೋಜನೆ ಕೇಂದ್ರ ಪುರಸ್ಕೃತ ಹತ್ತಿ ಅಭಿವೃದ್ಧಿ ಯೋಜನೆಗಳಲ್ಲೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರುಗಳಿಗೆ ಬಿತ್ತನೆ ಬೀಜ, ಸುಧಾರಿತ ಕೃಷಿ ಉಪಕರಣಗಳು, ತುಂತುರು ನೀರಾವರಿ ಉಪಕರಣಗಳು, ಮುಂತಾದವನ್ನು ಒದಗಿಸುವ ಕಾರ್ಯ ಕ್ರಮವನ್ನು ಹಾಕಿಕೊಳ್ಳಲಾಗಿದೆ.

ವಿಷಯ :- ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಸಂಖ್ಯೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 2288 (2964)

ಶ್ರೀ ಚಂದ್ರಣ್ಣ (ದೇವನಹಳ್ಳಿ) :- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಬರತಕ್ಕ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಗಳೆಷ್ಟು?

ಆ) ಎಷ್ಟು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಲಾಭದಲ್ಲಿವೆ? ಹಾಗಿದ್ದಲ್ಲಿ ಯಾವ ಯಾವ ಬ್ಯಾಂಕುಗಳು ಲಾಭದಲ್ಲಿವೆ.